ನಡೆಯುವ ರಾಸಾಯನಿಕ ಕ್ರುಯೆಗಳಿಂದಾಗಿ ಉತ್ಪತ್ತಿಯಾಗುತ್ತವೆ. ಸಸ್ಯದ ಕಾಂಡದಲ್ಲಿ ಈ ಕ್ರಿಯೆಗಳು ನಡೆಯುತ್ತವೆ.



## ಆರೋಗ್ಯಕಾರಿ ಗುಣಗಳು

ವಸಾಬಿಯ ಪ್ರತಿಯೊಂದು ಭಾಗವೂ ಆರೋಗ್ಯವನ್ನು ಹೆಚ್ಚಿಸುವ ಗುಣವನ್ನು ಹೊಂದಿವೆ. ವಸಾಬಿಯ ಎಲೆ ಹಾಗೂ ಕಾಂಡದ ಭಾಗವು ಬ್ಯಾಕ್ಟೀರಿಯಾಗಳ ವಿರುದ್ಧ ಹೋರಾಡುವ ಗುಣ ಹೊಂದಿರುವುದರಿಂದ ಉಸಿರಾಟದ ತೊಂದರೆಗಳು, ಕೆಮ್ಮು, ನೆಗಡಿ, ಸೈನಸ್‌ನ ಮೇಲಾಗುವ ಒತ್ತಡ ನಿವಾರಿಸುವ ಶಕ್ತಿ ಹೊಂದಿದೆ.

ವಸಾಬಿಯನ್ನು ಅತಿಸಾರ ಬೇಧಿಗೆ ಔಷಧಿಯಾಗಿ ಬಳಸುವುದರಿಂದ ಅದು ಹಸಿವನ್ನು ಹೆಚ್ಚಿಸಿ, ದೇಹದಲ್ಲಿರುವ ವಿಷಕಾರಿ ಅಂಶಗಳನ್ನು ಹೊರಹಾಕುತ್ತದೆ. ವಸಾಬಿಯು ಅತ್ಯುತ್ತಮ ಆ್ಯಂಟಿ ಆಕ್ಸಿಡೆಂಟ್ ಆಗಿ ವರ್ತಿಸುವುದಲ್ಲದೇ ಜೀರ್ಣಾಂಗ ವ್ಯೂಹದ ತೊಂದರೆಗಳನ್ನು ನಿವಾರಿಸುವ ಸಾಮರ್ಥ್ಯವನ್ನು ಹೊಂದಿದೆ.

ವಸಾಬಿಯ ಶಕ್ತಿಶಾಲಿ ಪರಿಮಳದಿಂದ ಸೈನಸ್ ತೊಂದರೆಗಳನ್ನು ಸರಿಪಡಿಸಿ ಕೆಲವೇ ಸೆಕೆಂಡುಗಳಲ್ಲಿ ಮೂಗಿನ ಹೊರಳೆಗಳನ್ನು ಸ್ವಚ್ಛಗೊಳಿಸಿ ವ್ಯಕ್ತಿಯನ್ನು ಸಹಜವಾಗಿ ಉಸಿರಾಡುವಂತೆ ಮಾಡುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ವಸಾಬಿಯನ್ನು ಉಸಿರಾಡಿದ್ದೇ ಆದರೆ ಮೂಗಿನಲ್ಲಿ ನವೆ, ಉರಿಯುಂಟಾಗುತ್ತದೆ.

ಇತ್ತೀಚೆಗಷ್ಟೇ ಕಂಡುಕೊಂಡ ಅಂಶವೆಂದರೆ ವಸಾಬಿಯಲ್ಲಿರುವ ಕೆಲವು ರಾಸಾಯನಿಕ ವಸ್ತುಗಳಿಂದಾಗಿ ಕೆಲವು ರೋಗಗಳಲ್ಲಿ ಕಂಡುಬರುವ ರಕ್ತ ಹೆಪ್ಪುಗಟ್ಟುವಿಕೆಯನ್ನು ತಡೆಯಬಹುದಾಗಿದೆ. ಅಲ್ಲದೆ ಜಠರದಲ್ಲಿ  ಬೆಳೆಯಬಹುದಾದ ಕ್ಯಾನ್ಸರ್ ಕೋಶಗಳನ್ನು ತಡೆಗಟ್ಟುವ ಸಾಮರ್ಥ್ಯವಿದೆ ಎಂದೂ ಕಂಡುಕೊಳ್ಳಲಾಗಿದೆ.

ವಸಾಬಿಯನ್ನು ನೂಡಲ್ಸ್, ಸೂಪ್, ಮೀನು ಮತ್ತು ಮಾಂಸದ ಅಡುಗೆಗಳಲ್ಲಿ ಆಹಾರದ ರುಚಿ ಮತ್ತು ಪರಿಮಳವನ್ನು ಹೆಚ್ಚಿಸುವ ಸಲುವಾಗಿ ಬಳಸಲಾಗುತ್ತದೆ. ಇದು ಆಹಾರಕ್ಕೆ ಹೆಚ್ಚಿನ ರುಚಿ ಹಾಗೂ ದೇಹಕ್ಕೆ ಉಷ್ಣತೆಯನ್ನು ನೀಡುತ್ತದೆ. ಪ್ರಯಾಣದ ಸಮಯದಲ್ಲಿ ಬಳಸುವ ಚಿಕ್ಕ ಗಾತ್ರದ ಟೂಥ್‌ಪೇಸ್ಟ್‌ಗಳಲ್ಲಿ ವಸಾಬಿಯನ್ನು ಬಳಸಲಾಗುತ್ತಿದೆ.

